CC 2335/2022
CW-1 PW-1

**ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಎ.ಸಿ.ವೈ. ವಕೀಲರಿಂದಃ**

ಆರೋಪಿಯ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಒಂದು ದಾವೆ ಚಾಲ್ತಿಯಲ್ಲಿದೆ ಅಂದರೆ ಸರಿ. ಸದರಿ ದಾವೆಯು 3 ಅಡಿ ಓಣಿಗೋಸ್ಕರ ಇದೆ ಅಂದರೆ ಸರಿ. ದಿಃ 14.02.2022 ರಂದು ಈ ಪ್ರಕರಣದ 1 ನೇ ಆರೋಪಿಯು ಚಾಸಾ–3 ರವರ ವಿರುದ್ಧ ಸಿ.ಸಿ. ಕ್ಯಾಮೇರಾ ಕಳ್ಳತನದ ಬಗ್ಗೆ ಒಂದು ದೂರನ್ನು ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ದಿಃ 14.02.2022 ರಂದು 1 ಮತ್ತು 2 ನೇ ಆರೋಪಿತರು ಚಾಸಾ–3 ರವರ ವಿರುದ್ಧ ದೂರು ಸಲ್ಲಿಸಲು ಸಂಜೆ 6.00 ಗಂಟೆಗೆ ಠಾಣೆಯಲ್ಲಿದ್ದರು ಅಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿತಳು ವಿದ್ಯಾಭ್ಯಾಸಕ್ಕೋಸ್ಕರ ಸೊರಬದಿಂದ ಬೇರೆ ಊರಿನಲ್ಲಿ ಇರುತ್ತಾಳೆ ಅಂದರೆ ಸರಿ. 4 ನೇ ಆರೋಪಿಯು ಶಿವಮೊಗ್ಗದಲ್ಲಿರುತ್ತಾರೆ ಅಂದರೆ ಸರಿ. 5 ನೇ ಆರೋಪಿಯ ಸೊರಬ ಮುಖ್ಯ ರಸ್ತೆಯಲ್ಲಿ ಒಂದು ಅಂಗಡಿ ಇದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು 5 ನೇ ಆರೋಪಿಯು ಸೊರಬದ ನಾಮದೇವ ಗಲ್ಲಿಯಲ್ಲಿ ವಾಸವಾಗಿರುತ್ತಾರೆ ಎಂದು ಉತ್ತರಿಸುತ್ತಾರೆ. ಸೊರಬದ ಚಿಕ್ಕಪೇಟೆ ಓಣಿಯಲ್ಲಿ ಸಾಕಷ್ಟು ಬಂಗಾರದ ಅಂಗಡಿಗಳು ಇವೆ ಅಂದರೆ ಸರಿ. ನಮ್ಮ ಮನೆಯೂ ಸಹ ಸಿವಿಲ್ ವ್ಯಾಜ್ಯ ಇರುವ ಸ್ಥಳದ ಮುಂಭಾಗದಲ್ಲಿದೆ ಅಂದರೆ ಸರಿ. ನಮ್ಮ ಮನೆಯ ಮುಂಭಾಗ ಮತ್ತು ನಮ್ಮ ಅಂಗಡಿಯ ಮುಂಭಾಗದಲ್ಲಿ ಸಿ.ಸಿ.ಕ್ಯಾಮೇರಾಗಳು ಇವೆ ಅಂದರೆ ಸರಿ. 1 ಮತ್ತು 2 ನೇ

ಆರೋಪಿತರ ಅಂಗಡಿಯ ಮುಂಭಾಗದಲ್ಲಿ ಒಂದು ಸಿ.ಸಿ. ಕ್ಯಾಮೇರಾ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ದಿನ 2 ನೇ ಆರೋಪಿತನಿಗೆ ತುಂಬಾ ಹುಷಾರಿಲಿಲ್ಲ ಅಂದರೆ ಸರಿ. ಆ ದಿನ ನಾನು ಮತ್ತು ಚಾಸಾ–2 ರವರು ನಾನು ಹೇಳುವಂತ ಘಟನಾ ಸ್ಥಳಕ್ಕೆ ರಾತ್ರಿ 9.13 ನಿಮಿಷಕ್ಕೆ ಹೋಗಿರುತ್ತೇವೆ ಅಂದರೆ ಸರಿ. ನಂತರ ನಾನು ಹೇಳುವಂತ ಘಟನಾ ಸ್ಥಳದಿಂದ 13 ನಿಮಿಷಗಳ ನಂತರ ನಾನು ಮತ್ತು ಚಾಸಾ–2 ರವರು ಸ್ಥಳದಿಂದ ಕಾರಿನಲ್ಲಿ ಹೋಗಿರುತ್ತೇವೆ ಅಂದರೆ ಸರಿ. ಅದೇ ದಿನ ಆರೋಪಿತರು ನಮ್ಮ ವಿರುದ್ಧ ದೂರನ್ನು ಸಲ್ಲಿಸಲು ಹೋಗಿದ್ದ ಕಾರಣ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ಧ ದಾಖಲಿಸಲು ನಾನು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಪ್ರಮಾಣ ಪತ್ರವನ್ನು ಪಡೆದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ–2 ರವರನ್ನು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿ ಯಾವುದೇ ಚಿಕಿತ್ಸೆ ಕೊಡಿಸಿರುವುದಿಲ್ಲ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ 9.00 ಗಂಟೆಗೆ ಗಲಾಟೆ ಆಗಿದೆ ಎಂದು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ. ಆ ದಿನ ನಾನು ಹೇಳುವಂತೆ ಕಾರಿನ ಶೆಡ್ ನಲ್ಲಿ ಗಲಾಟೆ ಆಗಿರುತ್ತದೆ. ಈಗ ಕಾರ್ ಶೆಡ್ ಅಸ್ತಿತ್ವದಲಿಲ್ಲ. ನಾನು ಹೇಳುವಂತ ಘಟನಾ ದಿನದಿಂದ ಇಲ್ಲಿಯವರೆಗೂ ಸದರಿ 3 ಅಡಿ ಓಣಿಗಾಗಿ ವ್ಯಾಜ್ಯ ನಡೆಯುತ್ತಿದೆ ಅಂದರೆ ಸರಿ. ನಾನು ಹೇಳುವಂತ ದಿಃ 14.02.2022 ರಂದು ರಾತ್ರಿ 9.00 ಗಂಟೆಗೆ ಯಾವುದೇ ಗಲಾಟೆ ನಡೆದಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತ ಆರೋಪಿತರು ನನ್ನ ಮತ್ತು ಚಾಸಾ–2 ರವರ ಮೇಲೆ ಹಲ್ಲೆ ಮಾಡಿಲ್ಲ ಅಂದರೆ

ಸರಿಯಲ್ಲ. ನಮ್ಮ ಕಾರಿನ ಶೆಡ್ ಒಳಗಡೆ ಯಾವುದೇ ಕರೆಂಟ್ ಬೆಳಕು ಇರುವುದಿಲ್ಲ ಅಂದರೆ ಸರಿ. ನಾನು ಹೇಳುವಂತಹ ಆರೋಪಿತರು ಆ ದಿನ ನಮ್ಮೊಂದಿಗೆ ಯಾವುದೇ ಗಲಾಟೆ ಮಾಡಿರುವುದಿಲ್ಲ ಮತ್ತು ಹಲ್ಲೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಪಟ್ಟಣ ಪಂಚಾಯ್ತಿ ಸದಸ್ಯನಾಗಿದ್ದೆ ಅಂದರೆ ಸರಿ. ಚಾಸಾ–3 ರವರು ಸಹ ಪುರಸಭೆಯ ಸದಸ್ಯರಾಗಿರುತ್ತಾರೆ ಅಂದರೆ ಸರಿ. ಆರೋಪಿತರು ಯಾವುದೇ ರಾಜಕಾರಣ ಮಾಡುವುದಿಲ್ಲ, ಬಟ್ಟೆ ವ್ಯಾಪಾರ ಮಾಡುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿತರು ಗಲಾಟೆ ಮಾಡುವ ಸಾಮರ್ಥ್ಯ ಇರುವುದಿಲ್ಲ ಅಂದರೆ ಸರಿಯಲ್ಲ. ಆ ದಿನ 3 ನೇ ಆರೋಪಿತಳು ಊರಲ್ಲಿ ಇರದೇ ಇದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೀರಿ ಅಂದರೆ ಸರಿಯಲ್ಲ. 1 ನೇ ಆರೋಪಿತರ ಹಾಗೂ ಅವರ ಕುಟುಂಬದವರೊಂದಿಗೆ 2–3 ಬಾರಿ ಗಲಾಟೆ ಆಗಿರುತ್ತದೆ ಅಂದರೆ ಸರಿ. ಎಲ್ಲಾ ಪ್ರಕರಣದಲ್ಲಿ ನಾನೇ ಆಸ್ಪತ್ರೆಗೆ ದಾಖಲಾಗಿ ಅವರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಕಾಲಿನಿಂದ ಒದ್ದಿರುವುದಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಉಳಿದ ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಈ ಗಲಾಟೆಗೆ ಸಂಬಂಧಿಸಿದಂತೆ ನಾನು ಒಂದು ಬಾರಿಯೂ ಸಹ ಸೊರಬ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಚಾಸಾ–4 ಮತ್ತು 5 ನಮ್ಮ ಕುಟುಂಬಕ್ಕೆ ಪರಿಚಯಸ್ಥರು ಅಂದರೆ ಸರಿ. ಅವರು ನಮ್ಮ ಪರವಾಗಿ ಸಾಕ್ಷಿ ಹೇಳುತ್ತಾರೆ ಎಂದು ಈ

ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುತ್ತೀರಿ ಅಂದರೆ ಸರಿಯಲ್ಲ. ನಾನು ಹೇಳುವಂತೆ ದಿಃ14.02.2022 ರಂದು ರಾತ್ರಿ 9.00 ರಿಂದ 9.13 ರವರೆಗೆ ನಮ್ಮನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗಳು ಸ್ಥಳಕ್ಕೆ ಬಂದಿರುವುದಿಲ್ಲ ಅಂದರೆ ಸರಿಯಲ್ಲ. ಸೊರಬದ ಚಿಕ್ಕಪೇಟೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಅಂದರೆ ಸರಿ.

2. ನಮ್ಮ ಕಾರ್ ಶೆಡ್ ನಿಂದ ರಸ್ತೆಯು 40 ಅಡಿ ಅಂತರದಲ್ಲಿದೆ. ನಮ್ಮ ಕಾರ್ ಶೆಡ್ ನ ಪಕ್ಕದಲ್ಲಿರುವ ಮನೆಯು 15 ಅಡಿ ಅಂತರದಲ್ಲಿದೆ. ಸದರಿ ಕಾರ್ ಶೆಡ್ ನಿಂದ 3 ಅಡಿ ದಾರಿಯು ಎಷ್ಟು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಆದರೆ ಸ್ವಲ್ಪ ಜಾಗ ಇದೆ. ನಾನು ಹೇಳುವಂತಹ ದಿಃ 22.03.2022 ರಂದು ತನಿಖಾಧಿಕಾರಿಯವರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತೆ ನಮ್ಮ ನಿವೇಶನದಲ್ಲಿ ಯಾವುದೇ ಕಾರ್ ಶೆಡ್ ಇರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಕಾರ್ ಶೆಡ್ ನ್ನು ನಿರ್ಮಿಸಿ ಪಂಚನಾಮೆ ಕಾಲಕ್ಕೆ ನಿಪಿ–3 ರಂತೆ ಭಾವಚಿತ್ರವನ್ನು ತೆಗೆಸಿರುತ್ತೀರಿ ಅಂದರೆ ಸರಿಯಲ್ಲ. ನಿಪಿ–3 ರಂತೆ ಪೂರ್ವ ಭಾಗಕ್ಕೆ ಯಾವುದೇ ಖಾಲಿ ಜಾಗ ಇರುವುದಿಲ್ಲ ಅಂದರೆ ಸರಿ. ಆ ಕಾರಣ ನಿಪಿ–3 ರಲ್ಲಿ ಕಾಣುವ ಸ್ಥಳವು ಆರೋಪಿಯ ಮನೆಯ ಪಕ್ಕದ ಖಾಲಿ ಜಾಗ ಅಲ್ಲ ಅಂದರೆ ಸರಿಯಲ್ಲ. ದಿಃ22.03.2022 ರಂದು ತನಿಖಾಧಿಕಾರಿಯವರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿರುವುದಾಗಲಿ, ಭಾವಚಿತ್ರ ತೆಗೆದಿರುವುದಾಗಲಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತ ಘಟನಾ

ದಿನ ಆರೋಪಿತರು ಹಲ್ಲೆ ಮಾಡಿದ್ದಾಗಲಿ, ಅವಾಚ್ಯ ಶಬ್ದಗಳಿಂದ ಬೈದಿರುವುದಾಗಲಿ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ಒಂದು ಪ್ರಕರಣ ದಾಖಲಿಸಿರುವ ಕಾರಣ ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**